

**ವೈದ್ಯಕೀಯ, ಫಿಟ್‌ನೆಸ್, ಆರೋಗ್ಯ ಕ್ಷೇತ್ರದಲ್ಲಿ ಮೈಮೇಲೆ ಧರಿಸುವಂತಹ ಸಾಧನಗಳ ಉದ್ಯಮದ ಒಟ್ಟು ಜಾಗತಿಕ ವಹಿವಾಟು 20 ಶತಕೋಟಿ ಡಾಲರ್.**

ಉದಾಹರಣೆಗೆ ಅಂಧರು ಬಳಸುವ ಕೋಲಿದೆಯಲ್ಲ, ರಸ್ತೆ, ಪಾದಚಾರಿ ಮಾರ್ಗಗಳಲ್ಲಿ ಓಡಾಡುವಾಗ ಮುಂದೆ ಅಡೆತಡೆಗಳಿವೆಯೇ ಎಂಬುದನ್ನು ಕೋಲಿನಿಂದ ಖಾತ್ರಿ ಪಡಿಸಿಕೊಂಡು ಸರಸರನೆ ಓಡಾಡುವುದನ್ನು ಗಮನಿಸಿದ್ದೀರಿ. ಇದೀಗ ಅವರು ಇನ್ನಷ್ಟು ಆತ್ಮವಿಶ್ವಾಸದಿಂದ ಓಡಾಡುವಂತೆ ಮಾಡಿದೆ ಒಂದು ಸ್ಮಾರ್ಟ್ ತಂತ್ರಜ್ಞಾನ. ದೆಹಲಿಯ ಭಾರತೀಯ ತಂತ್ರಜ್ಞಾನ ಸಂಸ್ಥೆ (ಐಐಟಿ) ಇದನ್ನು ಅಭಿವೃದ್ಧಿಪಡಿಸಿದೆ. ಎಲ್ಲೋ ಮುಖಕ್ಕೆ ಬಡಿಯಬಹುದಾದ ಮರದ ರೆಂಬೆ, ತಲೆಗೆ ತಗುಲಬಹುದಾದ ಜಾಹೀರಾತು ಫಲಕಗಳಿಂದಲೂ ತೊಂದರೆಗೆ ಒಳಗಾಗದೇ, ಗಾಯಗೊಳ್ಳದೇ, ಬೇರೆಯವರ ಸಹಾಯ ಯಾಚಿಸದೇ ಓಡಾಡಬಹುದು. ಈ ಸಾಮಾನ್ಯ ಕೋಲಿಗೆ ಸಾಧನವೊಂದನ್ನು ಅಳವಡಿಸಲಾಗಿದ್ದು, ತಲೆ ಮೇಲಿರುವ, ಮುಂದೆ ಇರುವ ವಸ್ತುಗಳನ್ನು ಕೆಲವು ಮೀಟರ್ ಅಂತರದಿಂದಲೇ ಗ್ರಹಿಸಿ ವೈಬ್ರೇಟರ್‌ನಿಂದ ಮುನ್ಸೂಚನೆ ನೀಡುತ್ತದೆ ಈ 'ಸ್ಮಾರ್ಟ್ ಕೇನ್'.

ಇವೆಲ್ಲ ಸಣ್ಣ ಸಣ್ಣ ಸಂಶೋಧನೆಗಳು ಎನಿಸಬಹುದು. ಆದರೆ ಅದರ ಮಹತ್ವ ಅದರ ಅವಶ್ಯಕತೆ ಇರುವವರಿಗೆ ಮಾತ್ರ ಗೊತ್ತು. ವಯಸ್ಸಾದವರನ್ನು, ದೀರ್ಘಕಾಲದಿಂದ ಕಾಯಿಲೆ ಪೀಡಿತರಾದವರನ್ನು ಇಂದಿನ ಸಣ್ಣ ಕುಟುಂಬಗಳಲ್ಲಿ ನೋಡಿಕೊಳ್ಳುವುದೇ ಕಷ್ಟ. ಹಾಗಂತ ಮನೆಯಲ್ಲೇ ಕಾಳಜಿ ತೆಗೆದುಕೊಳ್ಳಬಹುದಾದಂತಹ ರೋಗಿಗಳನ್ನು ಆಸ್ಪತ್ರೆಗಳಿಗೆ ಸೇರಿಸಿ ಹೆಚ್ಚುವರಿ ಹಣಕಾಸು ಹೊರೆ ಹೊರುವುದು ಯಾರಿಗೆ ಬೇಕು ಹೇಳಿ? ಅಥವಾ ದೀರ್ಘಕಾಲ ನರ್ಸ್‌ಗಳನ್ನು ನೇಮಕ ಮಾಡಿಕೊಳ್ಳುವುದೂ ಕೂಡಾ ಜೇಬಿಗೆ ಕತ್ತರಿಯೇ! ಇಂತಹ ಸಂದರ್ಭಗಳಲ್ಲಿ ಮನೆಯಲ್ಲೆ ಬಳಸಬಹುದಾದ ಕೆಲವು ವೈದ್ಯಕೀಯ ಉಪಕರಣಗಳು ನೆರವಿಗೆ ಬರುತ್ತವೆ. ಅಂತಹ ಉತ್ಪನ್ನಗಳ ದೊಡ್ಡ ಪಟ್ಟಿಯೇ ನಮ್ಮ ಮುಂದಿದ್ದು, ಆಯ್ಕೆಗೆ ಸಾಕಷ್ಟು ಅವಕಾಶಗಳಿವೆ.

ಬೆಂಗಳೂರನ್ನೇ ತೆಗೆದುಕೊಳ್ಳಿ. ಇದು ಅಸ್ತಮಾ ಸ್ನೇಹಿ ನಗರ. ಇಲ್ಲಿ ಅಸ್ತಮಾ ಪೀಡಿತರು ದೊಡ್ಡ ಸಂಖ್ಯೆಯಲ್ಲಿದ್ದಾರೆ. ಇತ್ತೀಚಿನ ಕೆಲವು ವರ್ಷಗಳಲ್ಲಂತೂ ಚಿಕ್ಕ ಮಕ್ಕಳು ಕೂಡಾ ಬ್ರೊಂಕೈಟಿಸ್, ಅಸ್ತಮಾ, ಅಲರ್ಜಿ ಮೊದಲಾದ ಉಸಿರಾಟದ ತೊಂದರೆಗಳಿಂದ ನರಳುವುದು ಸಹಜವೆಂಬಂತೇ ಆಗಿಬಿಟ್ಟಿದೆ. ಬೆಂಗಳೂರಿನ ಹವಾಮಾನ, ಮಾಲಿನ್ಯ, ಬೇಕರಿ ತಿನಿಸುಗಳು, ಇಲ್ಲಿರುವ ಮರಗಳು ಹೂ ಅರಳಿಸುವ ಸಂದರ್ಭದಲ್ಲಿ ಗಾಳಿಯಲ್ಲಿ ತೇಲಾಡುವ ಪರಾಗಕಣಗಳು ಇದಕ್ಕೆ ಕಾರಣ ಎಂಬುದು ವೈದ್ಯರ ಅಂಬೋಣ. ಕೊನೆಯಲ್ಲಿ ರಾಸಾಯನಿಕಗಳ ಅತಿಯಾದ ಬಳಕೆಯಿಂದ ಇಳಿಮುಖವಾಗುತ್ತಿರುವ ರೋಗ ನಿರೋಧಕ ಶಕ್ತಿಯೂ ಈ ಅಲರ್ಜಿಗೆ ಕಾರಣ ಎಂಬುದನ್ನೂ ಮರೆಯುವಂತಿಲ್ಲ. ಕೆಲವೊಮ್ಮೆ 'ನೆಬುಲೈಜೇಶನ್' ಕ್ರಿಯೆಯಿಂದ ಎದೆಯಲ್ಲಿ ಕಟ್ಟಿಕೊಂಡ ಕಫವನ್ನು ಸಡಿಲಗೊಳಿಸಿ ಉಸಿರಾಟವನ್ನು ಸರಾಗಗೊಳಿಸಬಹುದು. ನೆಬುಲೈಜರ್ ಎಂಬ ಸಣ್ಣ ಉಪಕರಣವು ದ್ರವ ರೂಪದಲ್ಲಿರುವ ಔಷಧವನ್ನು ಸಿಂಪರಣೆ ಮಾಡುತ್ತದೆ. ಇದನ್ನ ಉಸಿರಿನ ಮೂಲಕ ಎಳೆದುಕೊಳ್ಳಬೇಕು. ಇದಕ್ಕಾಗಿ ಪ್ರತೀ ದಿನ ವೈದ್ಯರ




**ಶ್ರೀ ಪಂಚಮುಖಿ ಜ್ಯೋತಿಷ್ಯಂ**

INDIA'S MOST POPULAR ASTROLOGER

**ಪಂಡಿತ. ಶ್ರೀ ಗಣೇಶ್ ಕುಮಾರ್** ಶ್ರೀ ಶ್ರೀ ಹನುಮಾನ್ ಆರಾಧಕರು



ಕೇರಳ, ಕಲ್ಕತ್ತಾದ ಸಾವಿರಾರು ವರ್ಷಗಳ ಹಿಂದಿನ ಪ್ರಾಚೀನ ನಾಡಿಗ್ರಂಥ ಆಧಾರದಿಂದ ಸರ್ವಮಂತ್ರ ವಿದ್ಯೆ, ಜ್ಯೋತಿಷ್ಯ ಶಾಸ್ತ್ರ ಪಂಚಮಹಾಗುರುಗಳ ಬೋಧನೆಯಿಂದ ಯೋಗ ಯಜ್ಞಗಳ ಮೂಲಕ ಸರ್ವ ವಿದ್ಯೆಯನ್ನು ತಮ್ಮ ವಶದಲ್ಲಿರಿಸಿಕೊಂಡಿರುವವರು. ವಶೀಕರಣ, ಮದುವೆ, ಸಂತಾನ, ದಾಂಪತ್ಯ, ಪ್ರೇಮವಿಚಾರ, ಲೈಂಗಿಕ, ಮಾನಸಿಕ, ಗೃಹಶಾಂತಿ, ವಿದ್ಯೆ, ಆರೋಗ್ಯ, ವಿದೇಶ ಪ್ರಯಾಣ, ಹಣಕಾಸು, ವ್ಯಾಪಾರ,ಉದ್ಯೋಗ, ಕೋರ್ಟ್ ಕೇಸು, ಸಾಲಬಾಧೆ, ಮಾಟಬಾಧೆ, ಶತ್ರುಕಾಟ, ಅಲ್ಲದೆ ರಾಜಯೋಗ ವಶ ಮತ್ತು ಅಖಂಡ ಯೋಗವಶಗಳು, ಇನ್ನಿತರ ನಿಮ್ಮ ಯಾವುದೇ ಕಠಿಣ, ನಿಗೂಢ ಮತ್ತು ಗುಪ್ತ ಸಮಸ್ಯೆಗಳಿಗೆ, ಸಲಹೆ ಮತ್ತು ಪರಿಹಾರ ಶತಸಿದ್ಧ.

600 ವರ್ಷ ಹಳೆಯ ಪಂಚಸಿದ್ಧಿ ತಂತ್ರಗಳಿಂದ ನಿಮ್ಮ ದುಶ್ಚಟ, ದೀರ್ಘಾವಧಿ, ಲೈಂಗಿಕ, ಸಂತಾನ, ಸಮಸ್ಯೆಗಳಿಗೆ ಸನಾತನ ಪ್ರಕ್ರಿಯೆಗಳಿಂದ ಅತೀ ಶೀಘ್ರದಲ್ಲಿ ಸಮಗ್ರ ಪರಿಹಾರ ಕಲ್ಪಿಸುತ್ತಿರುವವರು.

ವಿ.ಸೂ.: ಇಲ್ಲಿ ಹೇಳುವ ವಿಷಯಗಳೆಲ್ಲವೂ ಗುಪ್ತವಾಗಿರುವುದರಿಂದ ನಿಮ್ಮ ಯಾವುದೇ ಸಮಸ್ಯೆಗಳನ್ನು ಹೇಳಲು ಹಿಂಜರಿಯಬೇಕಾಗಿಲ್ಲ. ದೂರವಾಣಿ ಹಾಗೂ ಪತ್ರದ ಮೂಲಕ ವಿವರಗಳನ್ನು ಪಡೆಯಬಹುದು.

**ಬೆಂಗಳೂರು ಖಾಯಂ ಮನೆ ವಿಳಾಸ** ನಂ.167/3, ಮೊದಲನೇ ಮಹಡಿ, 1ನೇ ಮುಖ್ಯರಸ್ತೆ, 9ನೇ ಅಡ್ಡರಸ್ತೆ, ಮುತ್ತುರಾಯಸ್ವಾಮಿ ದೇವಸ್ಥಾನದ ಹತ್ತಿರ, ಮೈಸೂರು ಸರ್ಕಲ್, (ಸಿರಸಿ ವೃತ್ತ), ಚಾಮರಾಜಪೇಟೆ, ಬೆಂಗಳೂರು-18.

**ಮೈಸೂರಿನಲ್ಲಿಯೂ ಲಭ್ಯವಿರುತ್ತಾರೆ**

ಸಮಸ್ಯೆ ಏನೇ ಇರಲಿ, ಎಷ್ಟೇ ಕಠಿಣವಾಗಿರಲಿ 600 ವರ್ಷಗಳ ಹಳೆಯ 108 ಜ್ಯೋತಿಷ್ಯ ತಂತ್ರಗಳಿಂದ ಮಹೋನ್ನತ ಪರಿಹಾರಗಳು.

ಬೆಂಗಳೂರು ಮೈಸೂರು **9880444450**